IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಕನ್ನಡ ಭಾಷೆ ಮತ್ತು ಸಾಹಿತ್ಯ ಪರಂಪರೆ

ಡಾ.ಪುಟ್ಟಮಣಿ ದೇವಿದಾಸ
ಸಹಾಯಕ ಪ್ರಾಧ್ಯಾಪಕರು
ಶರಣಬಸವೇಶ್ವರ ವಾಣಿಜ್ಯ
ಮಹಾವಿದ್ಯಾಲಯ, ಕಲಬುರಗಿ

ಭಾಷೆಯೆಂದರೆ, ಅದು ಕೇವಲ ವ್ಯವಹಾರಕ್ಕಾಗಿ ಬಳಸುವ ಒಂದು ಮಾಧ್ಯಮವಲ್ಲ, ಭಾಷೆಯಂದರೆ ಅದು ದೇಶ, ಜನಾಂಗದ ಚರಿತ್ರೆ, ಸಂಸ್ಕೃತಿ, ಸಂಪ್ರದಾಯ, ಭಾವನೆಗಳ ಅಭಿವ್ಯಕ್ತಿ, ಸಂಬಂಧಗಳನ್ನು ಬೆಸೆಯುವ ಕೊಂಡಿ. ಹೀಗೆ ಏನೆಲ್ಲವೂ ಆಗಿರುತ್ತದೆ. ಅಂತೆಯೇ ಪ್ರತಿಯೊಂದು ಭಾಷೆಗೂ ತನ್ನದೇ ಆದ ಒಂದು ಪರಂಪರೆಯಿದೆ, ಅಸ್ತಿತ್ವವಿದೆ, ಇದಕ್ಕೆ ಕನ್ನಡ ಭಾಷಯೂ ಹೊರತಲ್ಲ.

ಭಾರತದ ಅತ್ಯಂತ ಪ್ರಾಚೀನ ಭಾಷೆಗಲ್ಲಿ ಕನ್ನಡ ಭಾಷೆಯೂ ಕೂಡ ಒಂದಾಗಿದೆ. ದ್ರಾವಿಡ ಭಾಷಾಗುಂಪಿಗೆ ಸೇರಿದ ಈ ಭಾಷೆಗೆ ಸುಮಾರು ಕ್ರಿ.ಶ. ೧ನೇ ಶತಮಾನದಷ್ಟು ಪ್ರಾಚೀನತೆಯನ್ನು ದೊರಕಿಸಿಕೊಡುವಲ್ಲಿ ವಿದ್ವಾಂಸರು ಯಶಸ್ವಿಯಾಗಿದ್ದಾರೆ. ಕ್ರಿ.ಶ ೨ನೇ ಶತಮಾನದ ಓಕ್ಸಿರಿಂಕೆಸ್ ಪೇಪಿರಸ್‌ನು ತನ್ನ ಒಂದು ಗ್ರೀಕ್ ಪ್ರಹಸನದಲ್ಲಿ ಕನ್ನಡ ಪದಗಳನ್ನು ಬಳಸಿದ್ದನೆಂದು, ಮಹಾಭಾರತದ ಕೆಲವು ಭಾಗಗಳಲ್ಲಿ, ಮಾರ್ಕಂಡೇಯ ಪುರಾಣ, ಪದ್ಮಪುರಾಣ ಮುಂತಾದವುಗಳಲ್ಲಿ ಕನ್ನಡ ಹಾಗೂ ಕರ್ನಾಟಕ ಎಂಬ ಪದಗಳಿದ್ದುದರಿಂದ ಕನ್ನಡ ಭಾಷೆಯು ಕ್ರಿ.ಶ. ಪೂರ್ವದಲ್ಲಿಯೇ ಬಹಳ ಪ್ರಸಿದ್ಧಿಯನ್ನು ಪಡೆದಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಕ್ರಿ.ಶ. ೧ನೇ ಶತಮಾನದಲ್ಲಿದ್ದ ಶಾತವಾಹನರ ದೊರೆ ಹಾಲರಾಜನ "ಗಾಥಾಸಪ್ತಶತಿ" ಎನ್ನುವ ಕೃತಿಯಲ್ಲಿ ತುಪ್ಪ ಪೊಟ್ಟ(ಹೊಟ್ಟೆ), ರೊಟ್ಟಿ, ಊರೋ ಇತ್ಯಾದಿ ಕನ್ನಡದ ಪದಗಳಿವೆ ಎಂಬುದು ವಿದ್ವಾಂಸರ ಅಭಿಪ್ರಾಯವಗಿದೆ. ಇನ್ನೊಂದು ಅಭಿಪ್ರಾಯದ ಪ್ರಕಾರ ಕ್ರಿ.ಶ. ಪೂರ್ವದಲ್ಲಿ ಮಧ್ಯಭಾರತದ ನರ್ಮದಾ ನದಿತೀರದ ವಿಂಧ್ಯ ಪರ್ವತ ಪ್ರದೇಶದಲ್ಲಿ ವಾಸಿಸುತಿದ್ದ ಗಿರಿಜನಾಂಗವು ಕನ್ನಡ ಭಾಷೆಯನ್ನು

ಬಳಸುತ್ತಿದ್ದು ಇವರೇ ಕನ್ನಡಿಗರ ಪೂರ್ವಿಕರು, ಕನ್ನಡ ರಾಜ್ಯವನ್ನು ಕಟ್ಟಿದವರೆಂದು, ಮುಂದೆ ರಾಷ್ಟ್ರಕೂಟ ಅರಸರು ಇದೇ ನದೀ ತೀರದಲ್ಲಿ ಪ್ರಾರಂಭದಲ್ಲಿ ತಮ್ಮ ರಾಜಧಾನಿಯನ್ನು ಸ್ಥಾಪಿಸಿದ್ದು ಇದಕ್ಕೆ ಸಾಕ್ಷಿಯಾಗಿದೆ.

ತಮಿಳುನಾಡು, ಆಂಧ್ರ ಮುಂತಾದ ಕಡೆಗೆ ದೊರೆತಿರುವ ಶಾಸನಗಳಲ್ಲಿಯೂ ಕೂಡ ಕನ್ನಡದ ಪದಗಳಿದ್ದು ಕನ್ನಡ ನಾಡು ಹಾಗೂ ನುಡಿಗಳು ಕ್ರಿ.ಶ. ಪೂರ್ವದಲ್ಲಿಯೇ ಅಸ್ತಿತ್ವದಲ್ಲಿದ್ದವೆಂದು ಐರಾವತಂ, ಷ.ಷಟ್ಟರ್ ಮುಂತಾದ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಲ್ಲದೇ ಕರ್ನಾಟಕದಲ್ಲಿ ದೊರೆತ ಅಶೋಕನ ಶಾಸನಗಳಲ್ಲಿ ಅನೇಕ ಕನ್ನಡದ ಪದಗಳಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಈ ಎಲ್ಲ ಉಲ್ಲೆಖಗಳಿಂದ ತಿಳಿದುಬರುವುದೇನೆಂದರೆ ಕ್ರಿ.ಶ. ಪೂರ್ವ ೩ನೇ ಶತಮಾನದಹೊತ್ತಿಗೆ ಕನ್ನಡ ಭಾಷೆಯು ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡಿತ್ತು ಎನ್ನುವುದು. ಇನ್ನು ಕನ್ನಡ ಭಾಷೆ ಸಾಹಿತ್ಯದ ಪಟ್ಟವೇರಿದ ಪರಂಪರೆಯನ್ನು ಕುರಿತು ಸ್ಪಷ್ಟವಾಗಿ ಹೇಳುವ ಅನೇಕ ದಾಖಲಾತಿಗಳು ಕ್ರಿ.ಶ. ೪೫೦ರಿಂದಲೇಶ ದೊರಕುತ್ತವೆ.

ಕ್ರಿ.ಶ. ೪೫೦ರಲ್ಲಿ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿ ಎಂಬ ಗ್ರಾಮದಲ್ಲಿ ದೊರೆತ ಹಲ್ಮಿಡಿ ಶಾಸನವು ಕನ್ನಡದ ಪ್ರಥಮ ಉಪಲಬ್ಧ ಶಾಸನವಾಗಿದ ಇದರಲ್ಲಿ ಸಂಸ್ಕೃತ ಶಬ್ದಗಳೇ ಅಧಿಕವಾಗಿದ್ದರೂ ಕನ್ನಡದ ಪದಗಳೂ ಕೂಡ ಹೇರಳವಾಗಿದ್ದುದರಿಂದ ಕನ್ನಡ ಭಾಷೆ ಹಾಗೂ ಸಾಹಿತ್ಯದ ದೃಷ್ಟಿಯಿಂದ ಈ ಶಾಸನವು ಮಹತ್ವದ್ದಾಗಿದೆ. "ಕೇಳ್ದೋನ್","ನಾಡುಳ್", ವಿಟ್ಟಾರ್, ಪೊಗಳೆಪಟ್ಟಣ, ಪೆತ್ತಜಯನ್ ಎನ್ನುವಂತಹ ಅನೇಕ ಪದಗಳು ಪೂರ್ವದ ಹಳಗನ್ನಡದ ರೂಪದಲ್ಲಿದ್ದು, ಕನ್ನಡ ಭಾಷೆ ಹಾಗೂ ಸಾಹಿತ್ಯದ ಪ್ರಾಚೀನತೆಯನ್ನು ಇನ್ನೂ ಹಿಂದಕ್ಕೆ ಕೊಂಡುಯ್ಯುವ ಸಾಧ್ಯತೆಗಳಿವೆ ಎನ್ನುವ ಸೂಚನೆಯನ್ನು ಈ ಶಾಸನವು ನೀಡುವುದರಿಂದ ಈ ಶಾಸನಕ್ಕೆ ಇನ್ನೂ ಹೆಚ್ಚಿನ ಮಹತ್ವ ಪ್ರಾಪ್ತಿಯಾಗಿದೆ.

ಇನ್ನು ಸಾಹಿತ್ಯದ ದೃಷ್ಟಿಯಿಂದ ಹೇಳುವುದಾದರೆ ಪ್ರೌಢ ಸಂಸ್ಕೃತಕ್ಕೆ ಮಾರುಹೋದ ಕನ್ನಡ ಕವಿಯೊಬ್ಬನು ಮೃಗೇಶ ಮತ್ತು ನಾಗ ಎಂಬುವವರು ಯುದ್ಧದಲ್ಲಿ ಹೋರಾಡಿ ಜಯಗಳಿಸಿದ ವಿಜ ಅರಸ ಎಂಬುವವನಿಗೆ ಎರಡು ಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟ ವಿಷಯವನ್ನು ಪ್ರೌಢವಾದ ಕನ್ನಡ-ಸಂಸ್ಕೃತ ಗದ್ಯದಲ್ಲಿ ಈ ಶಾಸನದಲ್ಲಿ ನಿರೂಪಿಸಿದ್ದಾರೆ. ಇದರಿಂದ ಕನ್ನಡ ಭಾಷೆ ಹಾಗೂ ಸಾಹಿತ್ಯ ಕ್ರಿ.ಶ. ೮ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ತನ್ನ ಅಸ್ತಿತ್ವವನ್ನು ಕಂಡುಕೊಂಡಿತ್ತು ಎಂದು ಊಹಿಸಬಹುದಾಗಿದೆ. ಇದಾದ ನಂತರ ೬,೭,೮ನೇ ಶತಮಾನಗಳಲ್ಲಿ ಐಹೊಳೆ, ಶ್ರವಣಬೆಳ್ಗೊಳ. ಬಾದಾಮಿ, ಹಂಪೆ ಮುಂತಾದ ಕಡೆಗಳಲ್ಲಿ ಕನ್ನಡ ಸಾಹಿತ್ಯ, ಕರ್ನಾಟಕದ ಸಂಸ್ಕೃತಿ, ಪರಂಪರೆಗಳನ್ನು ಸಾರುವ ಅನೇಕ ಶಾಸನಗಳು ಲಭ್ಯವಾಗಿವೆ.

೭ನೇ ಶತಮಾನದ ಬಾದಾಮಿ ಶಾಸನದಲ್ಲಿ ಕನ್ನಡ ಸಾಹಿತ್ಯದ ತ್ರಿಪದಿ ರೂಪವು ಮೊಟ್ಟಮೊದಲಿಗೆ ಗೋಚರವಾಗುತ್ತದೆ. ಕಪ್ಪೆ ಅರಭಟ್ಟ ಎನ್ನುವ ವ್ಯಕ್ತಿಯ ವ್ಯಕ್ತಿತ್ವವು ಇದರಲ್ಲಿ ಅನಾವರಣಗೊಂಡದ್ದಕ್ಕಾಗಿ ಈ ಶಾಸನವು ಕಪ್ಪೆ ಅರಭಟ್ಟನ ಶಾಸನವೆಂದೂ ಪ್ರಸಿದ್ಧವಾಗಿದೆ. ಇದರಲ್ಲಿಯ ತ್ರಿಪದಿ ರೂಪ ಈ ರೀತಿಯಾಗಿದೆ.

"ಸಾಧುಂಗೆ ಸಾಧು ಮಾಧುರ್ಯಂಗೆ ಮಾಧರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ"

ಕನ್ನಡಿಗರ ಸ್ವಾಭಿಮಾನ, ಔದಾರ್ಯತೆ, ದಯೆ, ಇತ್ಯಾದಿ ಗುಣಗಳನ್ನು ಈ ತ್ರಿಪದಿಯು ತಿಳಿಸುತ್ತದೆ. ಕನ್ನಡಿಗರು ಸಜ್ಜನರಿಗೆ ಸೇವಕರಾಗಿ ದುಷ್ಟರಿಗೆ ಮಹಾದುಷ್ಟರಾಗಿ ಹಾಗೂ ಒಳ್ಳೆಯವರಿಗೆ ದೇವಸಮಾನರಾಗಿ ಕಾಪಾಡುವ ಸ್ವಭಾವವುಳ್ಳವರಾಗಿದ್ದರೆಂದು ಈ ತ್ರಿಪದಿಯು ಅದ್ಭುತವಾಗಿ ಕನ್ನಡಿಗರ ಗುಣಸ್ವಭಾವಗಳನ್ನು, ವೀರಪರಂಪರೆಯನ್ನು ಸಾರುತ್ತಿದೆ.

ವಿಜಯನಗರದ ಅರಸ ಪ್ರೌಢದೇವರಾಯನಿಗೆ ಲಕ್ಷ್ಮೀಧರಾಮಾತ್ಯನೆಂಬ ಒಬ್ಬ ಮಂತ್ರಿಯಿದ್ದ. ಆ ಮಂತ್ರಿಯು ಮಗುವಾಗಿದ್ದಾಗ ಆತನ ತಾಯಿಯು ಆತನನ್ನು ಹರಸಿ ಹೇಳಿದ ನೀತಿಮಾತುಗಳು ಹೀಗಿವೆ. "ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗರಂ ಮಾಡಿಸು", ಕೆರೆ ಕಟ್ಟಿಸುವುದು ದಾನ, ಧರ್ಮ ಇತ್ಯಾದಿ ಜನಪರ ಸೇವೆಯನ್ನು ಮಾಡುವುದು ನಾಡಿನ ಸಂಸ್ಕೃತಿಯೇ ಆಗಿದ್ದು ತನ್ನ ಮಗನು ಕೂಡ ಜನಹಿತ ಕಾರ್ಯಗಳನ್ನು ಮಾಡುತ್ತ ಸಮಾಜಸೇವಕನಾಗಲಿ ಎಂದು ಬಯಸಿದ ಆ ಮಾತೆ ನಾಡಿದ ಹೆಮ್ಮೆಯ ಸಂಸ್ಕೃತಿಯ ಪ್ರತೀಕವಾಗಿ ನಿಲ್ಲುತ್ತಾಳೆ.

ಇನ್ನು ಕನ್ನಡ ಭಾಷೆ, ಸಾಹಿತ್ಯ, ಪರಂಪರೆಳನ್ನು ಸಾರುವ ಅನೇಕ ಕೃತಿಗಳು ನಮ್ಮಲ್ಲಿ ಬಹಳ ಪ್ರಾಚೀನ ಕಾಲದಿಂದ ದೊರಕುತ್ತವೆ. ಒಂಬತ್ತನೇ ಶತಮಾನದಲ್ಲಿ ರಚಿತವಾದ ಕನ್ನಡದ ಮೊಟ್ಟಮೊದಲ ಉಪಲಬ್ಧ ಲಕ್ಷಣಗ್ರಂಥವಾದ "ಕವಿರಾಜ ಮಾರ್ಗವು" ಅನೇಕ ಕಾರಣಗಳಿಗಾಗಿ ಮಹತ್ವವನ್ನು ಪಡೆದುಕೊಂಡಿದೆ. "ಕಾವೇರಿಯಿಂಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್" ಎಂದು ಕನ್ನಡ ನಾಡಿನ ವಿಸ್ತಾರತೆಯನ್ನು ತಿಳಿಸುತ್ತ,ಕನ್ನಡ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯ, ಪರಂಪರೆ, ಕನ್ನಡಿಗರ, ಔದಾರ್ಯ, ತ್ಯಾಗ, ಪ್ರೀತಿ, ವಿಶ್ವಾಸ, ಗಂಭೀರತೆ, ಶೌರ್ಯ, ಸ್ವಾಭಿಮಾನ ಇತ್ಯಾದಿ ಮೌಲ್ಯಗಳನ್ನು ಸವಿಸ್ತಾರವಾಗಿ ತಿಳಿಸುವ ಅತ್ಯಂತ ಮೌಲಿಕ ಕೃತಿಯಾಗಿದೆ. ಚಿತ್ತಾಣ, ಬೆದಂಡೆ, ಎನ್ನುವ ಕಾವ್ಯಪ್ರಕಾರಗಳನ್ನು, ಪಗರಣ ಗದ್ಯಕಥಾ ಎನ್ನುವ ಗದ್ಯಪ್ರಕಾರಗಳನ್ನು, ಒನಕೆವಾಡು ಓವನಿಗೆ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಉಲ್ಲೇಖಿಸುತ್ತದೆ. ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮುಂತಾದ ಗದ್ಯಕವಿಗಳು ಹಾಗೂ ಶ್ರೀವಿಜಯ, ಚಂದ್ರ, ಲೋಕಪಾಲ, ಪಂಡಿತ, ನೃಪತುಂಗ ಮುಂತಾದ ಗದ್ಯಕವಿಗಳು ಇದ್ದರೆಂದು ಉಲ್ಲೇಖಿಸುತ್ತದೆ.

ಕನ್ನಡಿಗರ ಸಾಹಿತ್ಯಗ್ರಹಿಕಾ ಸಾಮರ್ಥ್ಯ ಹಾಗೂ ರಚನಾ ಸಾಮರ್ಥ್ಯವನ್ನು ಕುರಿತಂತೆ ಕನ್ನಡಿಗರು "ಕುರಿತೋದದೆಯಂ ಕಾವ್ಯಪರಿಣತಮತಿಗಳು" ಎಂದು ಕವಿ ರಾಜಮಾರ್ಗವು ಹೇಳುವ ಮಾತು ತುಂಬ ಮಹತ್ವದ್ದಾಗಿದೆ. ಶಾಲಾ-ಕಾಲೇಜುಗಳಂತಹ ಶೈಕ್ಷಣಿಕ ಸ್ಥಳಗಳಿಗೆ ಹೋಗಿ ಕ್ರಮಬದ್ಧವಾದ ಶಿಕ್ಷಣ ಪಡೆದುಕೊಳ್ಳದೇ ಇದ್ದರೂ ಕೂಡ ಇಲ್ಲಿಯ ಜನರು ಉದ್ಗ್ರಂಥಗಳನ್ನು ಓದಿ ಅರ್ಥೈಸಿಕೊಳ್ಳುವುದಷ್ಟೇ ಅಲ್ಲದೇ ಕಾವ್ಯರಚನೆಯ ಸಾಮರ್ಥ್ಯವನ್ನು ಕೂಡ ಹೊಂದಿದ್ದರು ಎಂದು ಕನ್ನಡ ಜನಪದರನ್ನು ಇದು ಹೊಗಳುತ್ತದೆ. ಅಲ್ಲದೆ ಕನ್ನಡಿಗರ ಗುಣಸ್ವಭಾವಗಳನ್ನು ಹೀಗೆ ವರ್ಣಿಸುತ್ತದೆ.

"ಸುಭಟರ್ಕಳ್ ಕವಿಗಳ್ ಸುಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್
ಗುಣಿಗಳ್ ಅಭಿಮಾನಿಗಳತ್ಯುಗ್ರರ್ ಗಭೀರಚಿತ್ತರ್
ವಿವೇಕಿಗಳ್ ನಾಡವರ್ಗಳ್"

ಕನ್ನಡ ಜನರು ವೀರರು, ಕವಿಗಳು ಒಳ್ಳೆಯ ಪ್ರಭುಗಳು, ಗುಣಿಗಳು , ಅಭಿಮಾನಿಗಳು, ಗಂಭೀರಸ್ವಭಾವದ ಜೊತೆಗೆ ವಿವೇಕವುಳ್ಳವರೂ ಆಗಿದ್ದರೆಂದು ಕವಿರಾಜಮಾರ್ಗಕಾರನು ಅತ್ಯಂತ ಅಭಿಮಾನದಿಂದ ಹೇಳಿಕೊಳ್ಳುತ್ತಾನೆ. ಅಲ್ಲದೇ ಪುಲಿಗೆರೆ ಅಂದರೆ ಈಗಿನ ಲಕ್ಷ್ಮೀಶ್ವರ, ಕಿಸುವೊಳಲ್ ಅಂದರೆ ಪಟ್ಟದಕಲ್ಲು, ಕೊಪಣ (ಕೊಪ್ಪಳ), ಹಾಗೂ ಒಕ್ಕುಂದಗಳ ನಡುವಿನ ಪ್ರದೇಶವೇ ತಿರುಳ್ಗನ್ನಡ ನಾಡೆಂದು ಅಚ್ಚಕನ್ನಡ ಭಾಷೆಯನ್ನು ಆಡುವ ಪ್ರದೇಶಗಳನ್ನು ಗುರುತಿಸಿದ್ದಾನೆ.

ಶಿವಕೋಟ್ಯಾಚಾರ್ಯನು ರಚಿಸಿರುವ ಕನ್ನಡದ ಮೊಟ್ಟಮೊದಲ ಉಪಲಬ್ಧ ಗದ್ಯಗ್ರಂಥ ವಡ್ಡಾರಾಧನೆಯು ಕನ್ನಡ ಭಾಷೆ ಸಹಿತ್ಯ ಸಂಸ್ಕೃತಿ, ಪರಂಪರೆಗಳನ್ನು ತಿಳಿಸುವಂತಹ ಇನ್ನೊಂದು ಮೌಲಿಕ ಕನ್ನಡ ಕೃತಿಯಾಗಿದೆ ಸುಮಾರು ೧೯ ಕಥೆಗಳ ಮೂಲಕ ಮೌಲ್ಯ ಹಾಗೂ ಧರ್ಮವನ್ನು ಬೋಧಿಸುವ ಉತ್ಕೃಷ್ಟ ಕೃತಿಯಾಗಿದೆ.

"ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂದು ಕನ್ನಡ ನಾಡು ಹಾಗೂ ನುಡಿಯ ಬಗ್ಗೆ ಅತೀ ಅಭಿಮಾನದ ಮಾತುಗಳನ್ನಾಡಿದ ಕನ್ನಡದ ಆದಿಕವಿ, ವರಕವಿ, ಚಿರಕವಿಯೆಂದು ಖ್ಯಾತಿವೆತ್ತ ಹತ್ತನೇ ಶತಮಾನದಲ್ಲಿ ಬಾಳ ಬದುಕಿದ ಪಂಪನಿಂದ ಕನ್ನಡ ಭಾಷೆ, ಸಾಹಿತ್ಯ ಧರ್ಮ, ಸಂಸ್ಕೃತಿಗಳ ಬೆಳವಣಿಗೆಯ ಸ್ಥೂಲಚಿತ್ರಣವು ಸ್ಪಷ್ಟವಾಗಿ ಗೋಚರಿಸುತ್ತದೆ. ವಿಕ್ರಮಾರ್ಜುನವಿಜಯಂ (ಪಂಪಭಾರತ) ಹಾಗೂ ಆದಿಪುರಾಣ ಎನ್ನುವ ತನ್ನೆರಡು ಮೇರು ಕೃತಿಗಳನ್ನು ರಚಿಸಿ ಪಂಪನು ಕನ್ನಡ ಭಾಷೆ, ಸಾಹಿತ್ಯ ಮಾತ್ರವಲ್ಲ ಕನ್ನಡದ ಸಂಸ್ಕೃತಿ, ಪರಂಪರೆಗಳನ್ನು ಉಚ್ಛ್ರಾಯ ಸ್ಥಿತಿಗೆ ಏರಿಸಿದ್ದಾನೆ. "ಮಾನವಕುಲ ತಾನೊಂದೆ ವಲಂ" ಎಂದು ಹೇಳುತ್ತ ಮಾನವತೆಗೆ ಹೊಸ ಭಾಷ್ಯವನ್ನು ಬರೆದ ಮಹಾಮಾನವನಾಗಿದ್ದಾನೆ. ಕನ್ನಡದ ಹೆಮ್ಮೆಯ ಕವಿಯಾಗಿದ್ದಾನೆ. ಇವನ ನಂತರ ಬಂದ ರನ್ನ, ಪೊನ್ನ, ಜನ್ನ, ನಯಸೇನ, ಕೇಶಿರಾಜ ೧ನೇ ಹಾಗೂ ೨ನೇ ಗುಣವರ್ಮ, ನಾಗವರ್ಮ ಚಾವುಂಡರಾಯ ಮುಂತಾದವರು ಅತ್ಯುನ್ನತ ಕಾವ್ಯರಚನೆಯ ಮೂಲಕ ಕನ್ನಡ ಭಾಷೆ, ಸಾಹಿತ್ಯಧರ್ಮ, ಸಂಸ್ಕೃತಿಗಳಿಗೆ ಒಂದು ಭದ್ರ ನೆಲೆಯನ್ನು ಒದಗಿಸಿ ಅದು ಹೆಮ್ಮರವಾಗಿ ಬೆಳೆಯುವಂತೆ ಮಾಡಿದ್ದಾರೆ ಅಂತೆಯೇ ಹತ್ತನೇ ಶತಮಾನವನ್ನು ಸುವರ್ಣಯುಗವೆಂದು ಕರೆಯಲಾಗಿದೆ.

ಬಸವಾದಿ ಶರಣರು ಕನ್ನಡ, ಸಾಹಿತ್ಯ, ಭಾಷೆ, ಸಂಸ್ಕೃತಿ,ಧರ್ಮ,ಸಮಾಜ,ರಾಜಕೀಯ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಿಗೆ ತಮ್ಮ ಅದ್ಭುತವಾದ ವೈಚಾರಿಕ ಕ್ರಾಂತಿಯಿಂದಾಗಿ ಹೊಸ ಆಯಾಮಗಳನ್ನು ದೊರಕಿಸಿಕೊಟ್ಟರು. ಕನ್ನಡ ಸಾಹಿತ್ಯಕ್ಕೆ "ವಚನ" ಎನ್ನುವ ಹೊಸರೂಪವನ್ನು ರಚಿಸಿ ಅದರ ಮೂಲಕ ಜನಮಾನಸಕ್ಕೆ ಮೌಲ್ಯಗಳು ಮುಟ್ಟುವಂತೆ ಮಾಡಿದುದು ಶರಣರ ಅವಿಸ್ಮರಣೀಯ ಕಾರ್ಯವೇ ಆಗಿದೆ.

ಜಾತಿಭೇದ, ಲಿಂಗಭೇದ, ವೃತ್ತಿಭೇದದಂತಹ ಸಮಸ್ಯೆಗಳಿಂದ ಬಳಲುತ್ತಿದ್ದ ಸಮಾಜ ಸುಧಾರಣೆಯೇ ತಮ್ಮ ಧ್ಯೇಯವನ್ನಾಗಿಟ್ಟುಕೊಂಡ ಶರಣರು ಅದಕ್ಕಾಗಿಯೇ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಆ ಉದ್ದೇಶದ ಈಡೇರಿಕೆಗಾಗಿಯೇ ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಕೂಡ ಬಳಸಿಕೊಂಡರು. ಅಂತೆಯೇ ಇಲ್ಲಿಯವರೆಗೂ ಸಂಸ್ಕೃತ ಪ್ರಭಾವವಲಯದಲ್ಲಿಯೇ ಗಿರಕಿ ಹೊಡೆಯುತ್ತಿದ್ದ ಕನ್ನಡವನ್ನು ಅದರ ಕಪಿಮುಷ್ಠಿಯಿಂದ ಬಿಡಿಸಿ ಅದನ್ನು ಜನರಾಡುವ ಭಾಷೆಗೆ ಒಪ್ಪಿಸಿದುದು ವಚನಕಾರರು ಮಾಡಿದ ಅದ್ಭುತ ಪವಾಡವೆಂದೇ ಹೇಳಬೇಕು.

ದೇವರು, ಧರ್ಮ, ಸ್ವರ್ಗ, ನರಕ ಮುಂತಾದ ಅನಾವಶ್ಯಕ ಹಾಗೂ ಅವೈಜ್ಞಾನಿಕ ವಿಚಾರಗಳಿಗೆ ಬಲಿಯಾಗಿ ಬಳಲುತ್ತಿದ್ದ ಜನರಿಗೆ ಭಾಷೆ ಹಾಗೂ ಸಾಹಿತ್ಯದ ಮೂಲಕವೇ ಚಿಕಿತ್ಸೆ ಕೊಟ್ಟಿದ್ದ ವಚನಕಾರರು "ಕಾಯಕವೇ ಕೈಲಾಸ", "ಅಯ್ಯ ಎಂದರೆ ಸ್ವರ್ಗ ಎಲವೋ ಎಂದರೆ ನರಕ" ಎಂದು ತೀರ ಸರಳವಾದ ಭಾಷೆಯಲ್ಲಿಯೇ ಸ್ವರ್ಗ, ನರಕಗಳ ಭಯ ಹಾಗೂ ಭ್ರಮೆಗಳಿಂದ ಜನರನ್ನು ಹೊರತಂದರು.

"ಕಳಬೇಡ ಕೊಲಬೇಡ, ಹುಸಿಯ ನುಡಿಯಲುಬೇಡ
ತನ್ನ ಬಣ್ಣಿಸಲೂಬೇಡ ಇದಿರ ಹಳಿಯಲೂಬೇಡ
ಇದೇ ಅಂತರಂಗ-ಬಹಿರಂಗ ಶುದ್ಧಿ.." ಎಂದು ಹೇಳುತ್ತ

ದೇವರನ್ನು ಒಲಿಸಿಕೊಳ್ಳುವ ಪರಿ ಅಥವಾ ದೇವನ ಅನುಗ್ರಹಕ್ಕೆ ಪಾತ್ರರಾಗುವ ಮಾರ್ಗವನ್ನು ಇಷ್ಟು ಸರಳವಾಗಿ ತೋರಿಸಿಕೊಡಲು ಶರಣರಿಗಲ್ಲದೆ ಇನ್ನಾರಿಂದ ಸಾಧ್ಯ ಎನಿಸುತ್ತದೆ. "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆ ಹೊರಿಸದಿರಯ್ಯ.." ಎಂದು ಬಸವಣ್ಣನವರು ಹೇಳಿರುವ ತಾತ್ಪರ್ಯವಾದರೂ ಏನು? ಶೋಷಣೆ. ಹಿಂಸೆ ಮಾಡುವ ಧರ್ಮ ಅದ್ಹೇಗೆ ಉತ್ತಮ ಕುಲ? ಎಂದು ಪ್ರಶ್ನೆ ಮಾಡಿಕೊಳ್ಳಬೇಕು, ಆತ್ಮಾವಲೋಕನೆ ಮಾಡಿಕೊಳ್ಳಬೇಕೆಂಬುದೇ ಇಲ್ಲಿ ಬಸವಣ್ಣನವರ ವಿಚಾರವಾಗಿದೆ.

ಅಲ್ಲಮಪ್ರಭುಗಳು ಹೇಳುತ್ತಾರೆ "ಹೆಣ್ಣಿಗಾಗಿ ಸತ್ತದ್ದು ಕೋಟಿ ಮಣ್ಣಿಗಾಗಿ ಸತ್ತದ್ದು ಕೋಟಿ, ನಿನಗಾಗಿ ಸತ್ತದ್ದು ಯಾರನ್ನು ಕಾಣೆ ಗುಹೇಶ್ವರ" ಎಂದು.ಅಂದರೆ ಹೆಣ್ಣು, ಹೊನ್ನು, ಮಣ್ಣಿಗಾಗಿ ಅಧಿಕಾರ ಅಂತಸ್ತಿಗಾಗಿ ಬದುಕುವ, ಹೊಡೆದಾಡುವ ಜನರು ಸಾಕಷ್ಟು

ಸಮಾಜದಲ್ಲಿದ್ದಾರೆ. ಆದರೆ ಮೌಲ್ಯಗಳಿಗಾಗಿ ಬದುಕುವಂತಹ ಜನರು ತುಂಬ ವಿರಳವಾಗಿದ್ದಾರೆ. ಆದರೆ ಮೌಲ್ಯಗಳ ಕುಸಿತವಾದಾಗ ಸಮಾಜ ನಾಶವಾಗುತ್ತದೆ ಎಂದು ಅಲ್ಲಮಪ್ರಭುಗಳು ಬಹಳ ಸೂಚ್ಯವಾಗಿ ಹೇಳುತ್ತಾರೆ.

"ಬೆಟ್ಟದಾ ಮೇಲೊಂದು ಮನೆಯ ಮಾಡಿ.." ಎನ್ನುವ ಅಕ್ಕಮಹಾದೇವಿಯ ವಚನವು ಜಗತ್ತಿನಲ್ಲಿ ಮಾನವನು ಬಹು ಜಾಗೃತೆಯಿಂದ, ಬುದ್ಧಿವಂತಿಕೆಯಿಂದ, ಧೈರ್ಯದಿಂದ ಬದುಕುವ ಪರಿಯನ್ನು ಬಹಳ ಚೆನ್ನಾಗಿ ತಿಳಿಸಿಕೊಡುವುದರ ಜೊತೆಗೆ ಕನ್ನಡ ಭಾಷಾ ಹಾಗೂ ಸಾಹಿತ್ಯಗಳ ಸೌಂದರ್ಯವನ್ನು ಕೂಡ ಎತ್ತರೆತ್ತರಕ್ಕೆ ಏರಿಸಿದೆ ಹೀಗೆ ಅನೇಕ ಕಾರಣಗಳಿಂದಾಗಿ ೧೨ನೇ ಶತಮಾನಕ್ಕೆ ಭಾರತದ ಸಂದರ್ಭದಲ್ಲಿ ಒಂದು ವಿಶೇಷವಾದ ಮಹತ್ವದ ಸ್ಥಾನ ಪ್ರಾಪ್ತವಾಗಿದೆ. ಸಾಹಿತ್ಯದ ಮೂಲಕ ಚಳುವಳಿ ಅಥವ ಸಾಮಾಜಿಕ ಕ್ರಾಂತಿಮಾಡಿದ ಅದ್ಭುತ ಕಾಲವದು.

ಬಸವಾದಿ ಶರಣರ ನಂತರ ೧೩ನೇ ಶತಮಾನದಲ್ಲಿ ಬಾಳಿಬದುಕಿದ ರಗಳೆ ಕವಿಯೆಂದೇ ಪ್ರಖ್ಯಾತನಾದ ಹರಿಹರ, ಷಟ್ಪದಿ ಬ್ರಹ್ಮನೆನಿಸಿಕೊಂಡ ರಾಘವಾಂಕ, ೧೫ನೇ ಶತಮಾನದ ಕುಮಾರವ್ಯಾಸ, ಲಕ್ಷ್ಮೀಶ, ಷಡಕ್ಷರಿ, ಮುಂತಾದವರೆಲ್ಲ ಕನ್ನಡ ಭಾಷೆ ಹಾಗೂ ಪರಂಪರೆಗೆ ಹೊಸ ಹೊಸ ಸ್ಪಂದನೆಗಳನ್ನು ನೀಡಿರುವಂತಹ ಕವಿಗಳು. ಹರಿಹರನು ರಗಳೆ ಎನ್ನುವ ಹೊಸ ಪ್ರಕಾರದಲ್ಲಿ ಅನೇಕ ರೀತಿಯ ಹೊಸ ಹೊಸ ಪ್ರಯೋಗಗಳನ್ನು ಮಾಡಿದನು. ಬಸವ ರಾಜದೇವರ ರಗಳೆ, ಮಾದಾರ ಚೆನ್ನಯ್ಯನ ರಗಳೆ, ಕಾರಿಕಾಲಮ್ಮೆಯ ರಗಳೆ, ಕುಮಾರ ಗುಂಡಯ್ಯನ ರಗಳೆ. ಹೀಗೆ ಅನೇಕ ಶಿವಶರಣರನ್ನು ಕುರಿತು ರಗಳೆಗಳನ್ನು ರಚನೆ ಮಾಡಿ ಅವುಗಳ ಮೂಲಕ ಭಾಷೆ, ಸಂಸ್ಕೃತಿ ಸಾಹಿತ್ಯಗಳ ಬೆಳವಣಿಗೆಗೆ ಕಾರಣನಾಗಿದ್ದಾನೆ.

೧೭ನೇ ಶತಮಾನದಲ್ಲಿ ಪುರಂದರದಾಸ, ಕನಕದಾಸ ನಂತರ ಚಿಕ್ಕುಪಾಧ್ಯಾಯ, ಹೆಳವನಕಟ್ಟೆಗಿರಿಯಮ್ಮ, ರತ್ನಾಕರವರ್ಣಿ ಮುಂತಾದವರಿಂದರಿಂದ ಕನ್ನಡ ಭಾಷೆ ಹಾಗೂ ಸಾಹಿತ್ಯವು ಇನ್ನೂ ಸರಳವಾಗುತ್ತ ಜನರ ಹತ್ತಿರಕ್ಕೆ ಹೋಯ್ತು. ದಾಸಸಾಹಿತ್ಯದ ರೂವಾರಿಗಳಾದ ನರಹರಿತೀರ್ಥ ಶ್ರೀಪಾದರಾಯ ಪುರಂದರ, ಕನಕದಾಸರಿಂದ ಕನ್ನಡ ಸಾಹಿತ್ಯದಲ್ಲಿ ಕೀರ್ತನ ಸಾಹಿತ್ಯ ಹುಟ್ಟಿಕೊಂಡಿತ್ತು. ತಾಳ ತಂಬೂರಿಯಂತಹ ವಾದ್ಯಗಳೊಂದಿಗೆ ಕೀರ್ತನಕಾರರು ಸಾಹಿತ್ಯವನ್ನು ಸಂಗೀತದೊಂದಿಗೆ ಬೆಸೆಯುತ್ತ ಅವುಗಳ ಮೂಲಕ ಕನ್ನಡ ಭಾಷೆ, ಸಾಹಿತ್ಯವನ್ನು ಬಹಳ ಪರಿಣಾಮಕಾರಿಯಾಗಿ ಬೆಳೆಸಿದರು. ಜೊತೆಗೆ ಸುಳಾದಿ, ಉಗಾಭೋಗ ಎನ್ನುವ ಹೊಸಪ್ರಕಾರಗಳಲ್ಲಿಯೂ ಸಾಹಿತ್ಯರಚನೆ ಮಾಡಿದರು.

೧೯ನೇ ಶತಮಾನದ ಕೊನೆಯಲ್ಲಿ ಹೊಸಗನ್ನಡದ ಅರುಣೋದಯ ಅಥವಾ ಸಂಧಿಕಾಲದ ಸಂದರ್ಭದಲ್ಲಿ ಮುದ್ದಣ ಎನ್ನುವಂತಹ ಕವಿ, ರಾಮಭಕ್ತ ರಾಮಾಶ್ವಮೇಧ, ಶ್ರೀರಾಮಪಟ್ಟಾಭಿಷೇಕ, ಅದ್ಭುತರಾಮಾಯಣದಂತಹ ಕೃತಿಗಳನ್ನು ಬರೆದು ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾನೆ. ಮುದ್ದಣ ಮನೋರಮೆಯ ಸರಸ ಸಲ್ಲಾಪದ ಹೊಸ ತಂತ್ರವೊಂದನ್ನು ಕನ್ನಡ ಸಾಹಿತ್ಯಕ್ಕೆ ದೊರಕಿಸಿಕೊಟ್ಟ ಕೀರ್ತಿ ಮುದ್ದಣನಿಗೆ ಸಲ್ಲಬೇಕು.

ಇಂಗ್ಲೀಷ್ ಭಾಷೆ ಹಾಗೂ ಸಾಹಿತ್ಯ, ಇಂಗ್ಲೀಷರ ಸಂಪರ್ಕದಿಂದಾಗಿ ೨೦ನೇ ಶತಮಾನದ ಕನ್ನಡ ಸಾಹಿತ್ಯ ಹಾಗೂ ಭಾಷೆಗೆ ಹೊಸ ಮಾರ್ಗಗಳು ಆಲೋಚನೆಗಳು ದೊರಕಿದವು. ಇಂಗ್ಲೀಷ್ ಮಾತ್ರವಲ್ಲದೆ ಭಾರತೀಯ ಇತರ ಭಾಷೆ ಹಾಗೂ ಸಾಹಿತ್ಯಗಳ ಪ್ರಭಾವವು ಹೊಸಗನ್ನಡ ಸಾಹಿತ್ಯದ ಮೇಲಾಯ್ತು. ವಿಶೇಷವಾಗಿ ಬಂಗಾಲಿ, ಮರಾಠಿ, ತೆಲುಗು ಇತ್ಯಾದಿ ಭಾಷೆಗಳಲ್ಲಿ ರಚಿತವಾದ ಸಾಹಿತ್ಯದ ಪ್ರಭಾವಕ್ಕೆ ಕನ್ನಡ ಭಾಷೆ ಸಾಹಿತ್ಯಗಳು ಒಳಗಾದವು.

ಬಿ.ಎಂ. ಶ್ರೀಯವರ "ಇಂಗ್ಲೀಷ್ ಗೀತೆಗಳು" ಎನ್ನುವ ಇಂಗ್ಲೀಷ್ ಗೀತೆಗಳ ಅನುವಾದ ಕವನ ಸಂಕಲನದೊಂದಿಗೆ ಕನ್ನಡದಲ್ಲಿ ನವೋದಯ ಅಥವಾ ಹೊಸ ಯುಗ ಪ್ರಾರಂಭವಾಯ್ತು ಎಂದು ಹೇಳಲಾಗುತ್ತದೆ. ಈ ಮೊದಲೇ ಹೇಳಿದಂತೆ ಇಂಗ್ಲೀಷರ ಪ್ರಭಾವದಿಂದ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ನಾಟಕ, ಪ್ರಬಂಧ, ಆತ್ಮಚರಿತ್ರೆ, ಸಂಶೋಧನೆ, ಗ್ರಂಥಸಂಪಾದನೆ ಇತ್ಯಾದಿ ಹೊಸ ಹೊಸ ಪ್ರಕಾರಗಳ ರಚನೆಗಳಲ್ಲಷ್ಟೇ ಅಲ್ಲದೇ ವಿಷಯಗಳಲ್ಲಿಯೂ ಕೂಡ ಸಾಕಷ್ಟು ಬದಲಾವಣೆಗಳಾದವು.

ಕುವೆಂಪು, ಬೇಂದ್ರೆ, ಪಂಜೆ ಮಂಗೇಶ ರಾಯರು, ಗುಲ್ವಾಡಿ ವೆಂಕಟರಾಯರು, ಮಾಸ್ತಿ, ಕಾರಂತರು, ಡಿ.ವಿ.ಗುಂಡಪ್ಪ, ವಿ.ಕೃ.ಗೋಕಾಕ ಎಂ.ಕೆ.ಇಂದಿರಾ, ತ್ರಿವೇಣಿ ಮುಂತಾದವರು ಇಲ್ಲಿಯವರೆಗೆ ಸಾಹಿತ್ಯದಲ್ಲಿ ಇಲ್ಲದ ಶ್ರೀಸಾಮಾನ್ಯನ ಕಷ್ಟಸುಖ, ದುಃಖ ದುಮ್ಮಾನ, ನೋವು ನಲಿವು, ಹರ್ಷ–ಚೀತ್ಕಾರಗಳನ್ನು, ಪ್ರಕೃತಿ–ಮಾನವನ ಸಂಬಂಧಗಳನ್ನು, ಒಲವು ನಿಲುವು, ಸೌಂದರ್ಯಗಳನ್ನು, ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಸಮಸ್ಯೆಗೆ–ಪರಿಹಾರಗಳನ್ನು ಮಾನವನ ಹಕ್ಕು–ಕರ್ತವ್ಯ, ಜವಾಬ್ದಾರಿ ಇತ್ಯಾದಿಗಳನ್ನು ಸಾಹಿತ್ಯದ ಹೂರಣವನ್ನಾಗಿಸಿ ಕನ್ನಡ ಭಾಷೆ ಹಾಗೂ ಸಾಹಿತ್ಯಗಳನ್ನು ಸತ್ವ ಹಾಗೂ ಪ್ರಾಮಾಣಗಳೆಂದರಲ್ಲಿಯೂ ಆಕಾಶದೆತ್ತರಕ್ಕೆ ಬೆಳೆಸಿದರು.

ಕಾಲಮಾನದ ಅವಶ್ಯಕತೆ ಹಾಗೂ ಮಾನವನ ಆಲೋಚನೆ, ಧೋರಣೆಗಳಿಂದಾಗಿ ಸಾಹಿತ್ಯದಲ್ಲಿ ನವೋದಯ ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಎನ್ನುವಂತಹ ಹಂತಗಳು ಹುಟ್ಟಿಕೊಂಡವು. ೧೨ನೇ ಶತಮಾನದಲ್ಲಿ ಸಾಹಿತ್ಯವು ಚಳುವಳಿಯ ಮಾಧ್ಯಮವಾದಂತೆ ಮತ್ತೆ ಆಧುನಿಕ ಕಾಲದಲ್ಲಿಯೂ ಕೂಡ ದೀನ–ದಲಿತರ, ದುರ್ಬಲರ ಹೆಣ್ಣುಮಕ್ಕಳ ಪರವಾಗಿ ಹೋರಾಟಕ್ಕಿಳಿದ ಸಾಹಿತ್ಯವನ್ನು ದಲಿತ ಬಂಡಾಯವೆಂದು ಕರೆಯಲಾಯ್ತು.

ಹೀಗೆ ಹೊಸಗನ್ನಡ ಕಾಲವೂ ಈಗ ಮುಗಿದು ಆಧುನಿಕ ಕಾಲವೊಂದು ಕನ್ನಡ ಭಾಷೆ ಹಾಗೂ ಸಾಹಿತ್ಯದಲ್ಲಿ ಹುಟ್ಟಿಕೊಂಡಿದೆ. ಕಂಪ್ಯೂಟರ್ ಯುಗವಾದ್ದರಿಂದ ಇಲ್ಲಿ ಬ್ಲಾಗ್, ಫೇಸಬುಕ್, ಅಂತರ್ಜಾಲ ಮೊಬೈಲ್‌ಗಳಿಗೆ ಕನ್ನಡ ಭಾಷೆ ಹಾಗೂ ಸಾಹಿತ್ಯ ತೆರೆದುಕೊಂಡು ಇನ್ನೂ ವಿಸ್ತಾರವಾಗಿ, ವೇಗವಾಗಿ ಬೆಳೆಯುತ್ತಲಿದೆ ಹೊಸ ಹೊಸ ಪದಗಳು, ಪರಿಭಾಷೆಗಳು ಅಗತ್ಯಗಳಿಗೆ ತಕ್ಕಂತೆ ಹುಟ್ಟಿಕೊಳ್ಳುತ್ತಿವೆ. ಅಂತೆಯೇ ಸಾಹಿತ್ಯದಲ್ಲಿ ಆಧುನಿಕ ಕನ್ನಡದ ಕಾಲ ಪ್ರಾರಂಭವಾಗಿದೆ ಎಂದು ಹೇಳಲಾಗುತ್ತಿದೆ.

ಇಲ್ಲಿ ಒಂದು ಮಾತು ನೆನಪಿಸಲೇಬೇಕು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಸಾಹಿತ್ಯ ಕಲೆ, ಭಾಷೆ, ವಿಜ್ಞಾನ, ತಂತ್ರಜ್ಞಾನ ಹೀಗೆ ಯಾವುದೇ ಕ್ಷೇತ್ರವಿರಲಿ ಅದಕ್ಕೆಲ್ಲ ಮೂಲ ಪ್ರೇರಕಶಕ್ತಿ ಎಂದರೆ ನಮ್ಮ ಜನಪದರ ಸಾಹಿತ್ಯ, ಕಲೆ, ಹಾಗೂ ವಿದ್ಯೆ. ಪ್ರಾರಂಭದಿಂದ ಇಲ್ಲಿಯವರೆಗೂ ಒಂದಿಲ್ಲೊಂದು ರೀತಿಯಲ್ಲಿ ಜನಪದವು ಎಲ್ಲದಕ್ಕೂ ಪ್ರೇರಣೆ, ಪ್ರಭಾವ, ಆಕರಗಳನ್ನು ಒದಗಿಸುತ್ತ ಬಂದಿದೆ. ಕನ್ನಡ ಭಾಷೆ ಸಾಹಿತ್ಯವಂತೂ ಅದರ ಛತ್ರಛಾಯೆಯಲ್ಲಿಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತ, ಗಟ್ಟಿಗೊಳಿಸುತ್ತ ಬಂದಿದೆ. ಅಂತೆಯೇ ಇಂದಿನ ಯುಗದಲ್ಲಿ ವಿಜ್ಞಾನ ತಂತ್ರಜ್ಞಾನಗಳಂತಹ ವಿಷಯಗಳನ್ನು ಕೂಡ ಕನ್ನಡ ಭಾಷೆಯಲ್ಲಿಯೇ ರಚಿಸಿ ಅಧ್ಯಯಿನಿಸಬಹುದಾದಷ್ಟು ಸಶಕ್ತವಾಗಿ ಕನ್ನಡ ಭಾಷೆಯು ಬೆಳೆದಿದೆ ಎಂದರೆ ತಪ್ಪಾಗಲಾರದು.

ಹೀಗೆ ಕ್ರಿ.ಶ. ಪೂರ್ವದಿಂದಲೇ ಕನ್ನಡ ಭಾಷೆ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡು ಅದು ಹಲವಾರು ಭಾಷೆಗಳ ಜೊತೆಗೆ ಹೋರಾಡುತ್ತಾ ಕೆಲವೊಮ್ಮೆ ಅವುಗಳಿಂದ ಸ್ಫೂರ್ತಿ, ಪ್ರೇರಣೆಗಳನ್ನು ಪಡೆಯುತ್ತ, ತನ್ನ ಪ್ರಭಾವ ಅವುಗಳ ಮೇಲೂ ಬೀರುವಂತೆ ಮಾಡುತ್ತ, ಅದು ಕ್ರಿ.ಶ. ೬ನೇ ಶತಮಾನದ ಹೊತ್ತಿಗೆ ಸಾಹಿತ್ಯ ಸಿಂಹಾಸನವನ್ನೇರಿತ್ತು. ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗಳನ್ನು ಸ್ವೀಕರಿಸುತ್ತ,

ತಿರಸ್ಕರಿಸುತ್ತ ೧೦ನೇ ಶತಮಾನದಿಂದ ತನ್ನ ಸ್ಥಾನವನ್ನು ಭದ್ರಪಡಿಸಿಲೊಳ್ಳುತ್ತ ಕನ್ನಡ ನಾಡು ನುಡಿಯ ಸೇವೆಯನ್ನು ಮಾಡುತ್ತಿರುವ ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೆ ಬಹಳ ಶ್ರೀಮಂತವಾದ ಸುದೀರ್ಘವಾದ ಪರಂಪರೆಯಿರುವುದು ಕನ್ನಡಿಗರೆಲ್ಲರಿಗೂ ಅತ್ಯಂತ ಹೆಮ್ಮೆಯ ವಿಷಯವಾಗಿದೆ.

ಗ್ರಂಥಋಣ:


೧) ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ.ಮುಗುಳಿ

೨) ಕನ್ನಡ ಸಾಹಿತ್ಯ ಚರಿತ್ರೆ – ತ.ಸು.ಸ್ಯಾಮರಾಯ

೩) ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ.ಎಚ್.ತಿಪ್ಪೇರುದ್ರಸ್ವಾಮಿ

೪) ಕನ್ನಡ ಭಾಷಾವ್ಯಾಸಂಗ – ಡಾ.ಸಂಗಮೇಶ ಸವದತ್ತಿಮಠ

೫) ವಚನ ಚಳುವಳಿ – ಡಾ.ಎಚ್.ತಿಪ್ಪೇರುದ್ರಸ್ವಾಮಿ

೬) ಅರಿವು ಆಚಾರ – ಬಿ.ಮಹಾದೇವಪ್ಪ